# ಕರ್ನಾಟಕ ವಿಧಾನ ಪರಿಷತ್ತು

| | | |
|---|---|---|
| ಚುಕ್ಕೆ ಗುರುತಿಲ್ಲದ ಪ್ರಶ್ನೆ ಸಂಖ್ಯೆ | : | **214** |
| ಸದಸ್ಯರ ಹೆಸರು | : | ಶ್ರೀ ಕೆ. ಅಬ್ದುಲ್ ಜಬ್ಬರ್<br>(ವಿಧಾನಸಭೆಯಿಂದ ಚುನಾಯಿತರಾದವರು) |
| ಉತ್ತರಿಸುವ ದಿನಾಂಕ | : | **09-12-2025** |
| ಉತ್ತರಿಸುವ ಸಚಿವರು | : | ಮಾನ್ಯ ಸಣ್ಣ ಕೈಗಾರಿಕೆ ಹಾಗೂ ಸಾರ್ವಜನಿಕ ವಲಯ ಉದ್ಯಮಗಳ ಸಚಿವರು |

| ಕ್ರ. ಸಂ. | ಪ್ರಶ್ನೆಗಳು | ಉತ್ತರ |
|---|---|---|
| (ಅ) | ರಾಜ್ಯದಲ್ಲಿ ಇರುವ ಸಣ್ಣ ಕೈಗಾರಿಕೆಗಳ ಸಂಖ್ಯೆ ಎಷ್ಟು; ಸಣ್ಣ ಕೈಗಾರಿಕೆ ವ್ಯಾಪ್ತಿಯಲ್ಲಿ ಬರುವ ಉದ್ಯಮಗಳು ಯಾವುವು; (ಜಿಲ್ಲಾವಾರು ಮಾಹಿತಿ ಒದಗಿಸುವುದು) | ಭಾರತ ಸರ್ಕಾರದ ಉದ್ಯಮ್ ತಂತ್ರಾಂಶದಲ್ಲಿ ದಿನಾಂಕ:27.11.2025 ರ ಅಂತ್ಯಕ್ಕೆ ರಾಜ್ಯದಲ್ಲಿ ಒಟ್ಟು 24.17 ಲಕ್ಷ ಸೂಕ್ಷ್ಮ, ಸಣ್ಣ ಮತ್ತು ಮಧ್ಯಮ ಉದ್ಯಮಗಳು ನೋಂದಣಿಯಾಗಿರುತ್ತವೆ. ಅವುಗಳ ಪೈಕಿ 23,83,812 ಸೂಕ್ಷ್ಮ, 31,346 ಸಣ್ಣ ಮತ್ತು 2,290 ಮಧ್ಯಮ ಉದ್ಯಮಗಳು ನೋಂದಣಿಯಾಗಿರುತ್ತವೆ.. (ಜಿಲ್ಲಾವಾರು ವಿವರಗಳನ್ನು **ಅನುಬಂಧ-1 ರಲ್ಲಿ** ಲಗತ್ತಿಸಿದೆ.)<br><br>ಸಣ್ಣ ಕೈಗಾರಿಕೆ ವ್ಯಾಪ್ತಿಯಲ್ಲಿ ಕೆಳಕಂಡ ಉದ್ಯಮಗಳು ಬರುತ್ತವೆ:<br>1. ಜನರಲ್ ಇಂಜಿನಿಯರಿಂಗ್.<br>2. ಆಟೋಮೋಬೈಲ್ಸ್.<br>3. ಜವಳಿ.<br>4. ಕಟ್ಟಡ ಸಾಮಗ್ರಿ ನಿರ್ಮಾಣ.<br>5. ಆಹಾರ ಸಂಸ್ಕರಣೆ.<br>6. ಏರೋಸ್ಪೇಸ್.<br>7. ಕರಕುಶಲ.<br>8. ಗಾರ್ಮೆಂಟ್ಸ್.<br>9. ಖಾದಿ ಮತ್ತು ಗ್ರಾಮೋದ್ಯೋಗ ಇತ್ಯಾದಿ. |
| (ಆ) | ಸದರಿ ಕೈಗಾರಿಕಾ ಇಲಾಖೆಯಡಿ ಬರುವ ನಿಗಮ-ಮಂಡಳಿಗಳು, ಕಂಪನಿಗಳು. ಉದ್ಯಮ ಹಾಗೂ ಇತರೆ ಸಂಸ್ಥೆಗಳು ಯಾವುವು; | ಸಣ್ಣ ಕೈಗಾರಿಕಾ ಇಲಾಖೆಯಡಿ ಬರುವ ನಿಗಮ-ಮಂಡಳಿಗಳು ಈ ಕೆಳಕಂಡಂತಿರುತ್ತವೆ.<br>1. ಕರ್ನಾಟಕ ರಾಜ್ಯ ಕರಕುಶಲ ಅಭಿವೃದ್ಧಿ ನಿಗಮ ನಿಯಮಿತ.<br>2. ಕರ್ನಾಟಕ ರಾಜ್ಯ ಖಾದಿ ಗ್ರಾಮೋದ್ಯೋಗ ಮಂಡಳಿ.<br>3. ಕರ್ನಾಟಕ ರಾಜ್ಯ ಸಣ್ಣ ಕೈಗಾರಿಕಾ ಅಭಿವೃದ್ಧಿ ನಿಗಮ ನಿಯಮಿತ. |

| | | |
|---|---|---|
| | | 4. ಕರ್ನಾಟಕ ಇನ್ಸ್ಟಿಟ್ಯೂಟ್ ಆಫ್ ಲೆದರ್ & ಫ್ಯಾಷನ್ ಟೆಕ್ನಾಲಜಿ (ಕಿಲ್ಫ್)<br>5. ಕರ್ನಾಟಕ ರಾಜ್ಯ ತೆಂಗಿನ ನಾರಿನ ಅಭಿವೃದ್ಧಿ ನಿಗಮ ನಿಯಮಿತ.<br>6. ಕರ್ನಾಟಕ ರಾಜ್ಯ ತೆಂಗಿನ ನಾರಿನ ಸಹಕಾರ ಮಹಾಮಂಡಳಿ.<br>7. ಕರ್ನಾಟಕ ತಾಂತ್ರಿಕ ಉನ್ನತೀಕರಣ ಪರಿಷತ್ (ಕೆ.ಸಿ.ಟಿ.ಯು) |
| (ಇ) | ಸಣ್ಣ ಕೈಗಾರಿಕೆಗಳನ್ನು ಪ್ರಾರಂಭಿಸಲು ಇರುವ ಮಾನದಂಡಗಳು ಯಾವುವು? | ಹೊಸದಾಗಿ ಸಣ್ಣ ಕೈಗಾರಿಕೆ ಪ್ರಾರಂಭ ಮಾಡುವ ಕೈಗಾರಿಕೆಗಳಿಗೆ ಈ ಕೆಳಕಂಡ ಮಾನದಂಡಗಳು ಇರುತ್ತವೆ:<br><br>1. ಮಾಲೀಕತ್ವ ಉದ್ಯಮ ಸ್ಥಾಪಿಸಲು ಬಯಸುವ ಉದ್ಯಮಶೀಲರು ಕರ್ನಾಟಕ ಕೈಗಾರಿಕಾ ಪ್ರದೇಶಾಭಿವೃದ್ಧಿ ಮಂಡಳಿ / ಕರ್ನಾಟಕ ರಾಜ್ಯ ಸಣ್ಣ ಕೈಗಾರಿಕೆಗಳ ಅಭಿವೃದ್ಧಿ ನಿಗಮದ ನಿವೇಶನದಲ್ಲಿ ಕೈಗಾರಿಕೆಯನ್ನು ಸ್ಥಾಪಿಸುವ ಉದ್ದೇಶವನ್ನು ಹೊಂದಿದಲ್ಲಿ "ಕಾಮನ್ ಅಪ್ಲಿಕೇಷನ್ ಫಾರಂ"ನ್ನು ಭರ್ತಿ ಮಾಡಿ ಅರ್ಜಿಯನ್ನು ಸಂಬಂಧಿಸಿದ ಜಂಟಿ ನಿರ್ದೇಶಕರು, ಜಿಲ್ಲಾ ಕೈಗಾರಿಕಾ ಕೇಂದ್ರಕ್ಕೆ ಸಲ್ಲಿಸಬೇಕಾಗುತ್ತದೆ.<br>2. ಜಿಲ್ಲಾ ಕೈಗಾರಿಕಾ ಕೇಂದ್ರವು ಈ ಪ್ರಸ್ತಾವನೆಯನ್ನು ಜಿಲ್ಲಾಧಿಕಾರಿಗಳ ಅಧ್ಯಕ್ಷತೆಯಲ್ಲಿ ಜರುಗುವ "ಜಿಲ್ಲಾ ಮಟ್ಟದ ಏಕಗವಾಕ್ಷಿ ಸಮಿತಿ" ಸಭೆಯಲ್ಲಿ ಮಂಡಿಸಿ ಅನುಮೋದನೆ ಪಡೆದು ತಾತ್ವಿಕ ಅನುಮೋದನಾ ಪತ್ರವನ್ನು ಉದ್ಯಮಶೀಲರಿಗೆ ನೀಡುತ್ತದೆ.<br>3. ನಂತರ ಉದ್ಯಮಶೀಲರು ಕರ್ನಾಟಕ ಕೈಗಾರಿಕಾ ಪ್ರದೇಶಾಭಿವೃದ್ಧಿ ಮಂಡಳಿಗೆ ನಿವೇಶನಕ್ಕೆ ಅರ್ಜಿ ಸಲ್ಲಿಸಿ ನಿವೇಶನವನ್ನು ಪಡೆದುಕೊಳ್ಳಬೇಕಾಗುತ್ತದೆ. ಕರ್ನಾಟಕ ರಾಜ್ಯ ಸಣ್ಣ ಕೈಗಾರಿಕೆಗಳ ಅಭಿವೃದ್ಧಿ ನಿಗಮದ ನಿವೇಶನವಾದಲ್ಲಿ ಅದಕ್ಕೆ ಸಂಬಂಧಿಸಿದ ಸಮಿತಿಯು ನಿವೇಶನವನ್ನು ಹಂಚಿಕೆ ಮಾಡುತ್ತದೆ.<br>4. ಉದ್ಯಮಶೀಲರು ನಿವೇಶನದ ಹಂಚಿಕೆಯಾದ ನಂತರ ಯೋಜನೆಯ ಅನುಷ್ಠಾನಕ್ಕೆ ಅಗತ್ಯವಾದ ಹಣಕಾಸಿನ ನೆರವಿಗಾಗಿ ಬ್ಯಾಂಕ್ / ಕೆ.ಎಸ್.ಎಫ್.ಸಿ.ಗೆ ಯೋಜನಾ ವರದಿ ಮತ್ತು ಇತರೆ ಅಗತ್ಯ ದಾಖಲೆಗಳನ್ನು ಸಲ್ಲಿಸಿ ಸಾಲ ಮಂಜೂರಾತಿಯನ್ನು ಪಡೆದುಕೊಳ್ಳಬೇಕಾಗುತ್ತದೆ.<br>5. ಕೈಗಾರಿಕಾ ಕಟ್ಟಡ ನಿರ್ಮಾಣಕ್ಕಾಗಿ ಕೆ.ಐ.ಎ.ಡಿ.ಬಿ. / ಕೆ.ಎಸ್.ಎಸ್.ಐ.ಡಿ.ಸಿ. / ಸ್ಥಳೀಯ ಪ್ರಾಧಿಕಾರದಿಂದ ನಕ್ಷೆ ಅನುಮೋದನೆ ಪಡೆದುಕೊಂಡು ಕಟ್ಟಡ ನಿರ್ಮಾಣ ಪ್ರಾರಂಭಿಸಬೇಕಾಗುತ್ತದೆ.<br>6. ಕೈಗಾರಿಕಾ ಚಟುವಟಿಕೆಯನ್ನು ಆಧರಿಸಿ ಕರ್ನಾಟಕ ರಾಜ್ಯ ಪರಿಸರ ಮಾಲಿನ್ಯ ನಿಯಂತ್ರಣ |

| | | |
|---|---|---|
| | | ಮಂಡಳಿಯಿಂದ "ಕನ್ಸೆಂಟ್ ಫಾರ್ ಎಸ್ಟಾಬ್ಲಿಷ್‌ಮೆಂಟ್" ಅನುಮತಿಯನ್ನು ಪಡೆಯಬೇಕಾಗುತ್ತದೆ.<br>7. ವಿದ್ಯುತ್ ಸಂಪರ್ಕಕ್ಕಾಗಿ ಸಂಬಂಧಿಸಿದ ಎಸ್ಕಾಂನಿಂದ ಮಂಜೂರಾತಿಯನ್ನು ಪಡೆಯಬೇಕಾಗುತ್ತದೆ.<br>8. ನೀರಿನ ಸಂಪರ್ಕಕ್ಕಾಗಿ ಸಂಬಂಧಿಸಿದ ಪ್ರಾಧಿಕಾರದಿಂದ ಅನುಮತಿಯನ್ನು ಪಡೆಯಬೇಕಾಗುತ್ತದೆ.<br>9. ಚಟುವಟಿಕೆ / ಯಂತ್ರೋಪಕರಣಗಳನ್ನು ಆಧರಿಸಿ "ಫ್ಯಾಕ್ಟರೀಸ್ ಮತ್ತು ಬಾಯ್ಲರ್" ಇಲಾಖೆಯಿಂದ ಅನುಮತಿ ಪಡೆಯಬೇಕಾಗುತ್ತದೆ.<br>10. ಕಾರ್ಮಿಕರ ಸಂಖ್ಯೆಯನ್ನು ಆಧರಿಸಿ ಕಾರ್ಮಿಕ ಇಲಾಖೆಯಿಂದ ಅನುಮೋದನೆ ಪಡೆದುಕೊಳ್ಳಬೇಕಾಗುತ್ತದೆ.<br>11. ಕಾರ್ಮಿಕರ ಸಂಖ್ಯೆ 20 ಕ್ಕೂ ಹೆಚ್ಚಾದಲ್ಲಿ ಇ.ಎಸ್.ಐ/ ಪಿ.ಎಫ್ / ವೃತ್ತಿ ತೆರಿಗೆ ನೊಂದಣಿ ಪಡೆಯಬೇಕಾಗುತ್ತದೆ.<br>12. ಉದ್ದೇಶಿತ ಕೈಗಾರಿಕೆಯ ವಾರ್ಷಿಕ ವಹಿವಾಟು ರೂ.40 ಲಕ್ಷಕ್ಕಿಂತ ಹೆಚ್ಚಾಗುವುದಿದ್ದಲ್ಲಿ ವಾಣಿಜ್ಯ ತೆರಿಗೆ ಇಲಾಖೆಯಿಂದ "ಜಿ.ಎಸ್.ಟಿ" ನೊಂದಣಿ ಪಡೆಯಬೇಕಾಗುತ್ತದೆ.<br>13. ಆಹಾರ ಸಂಸ್ಕರಣಾ ಕೈಗಾರಿಕಾ ಚಟುವಟಿಕೆಯಾದಲ್ಲಿ "ಎಫ್.ಎಸ್.ಎಸ್.ಎ.ಐ." ರಹದಾರಿಯನ್ನು ಪಡೆಯಬೇಕಾಗುತ್ತದೆ.<br>14. ಅಪಾಯಕಾರಿ ಕೈಗಾರಿಕಾ ಚಟುವಟಿಕೆಯಾದಲ್ಲಿ "ಫೈರ್ ಸೇಫ್ಟಿ ಪ್ರಮಾಣ ಪತ್ರ" ವನ್ನು ಅಗ್ನಿಶಾಮಕ ಇಲಾಖೆಯಿಂದ ಪಡೆದುಕೊಳ್ಳಬೇಕಾಗುತ್ತದೆ.<br>15. ಕಟ್ಟಡ ನಿರ್ಮಾಣ, ಯಂತ್ರೋಪಕರಣಗಳ ಸ್ಥಾಪನೆಯಾದ ನಂತರ ಕೈಗಾರಿಕಾ ಚಟುವಟಿಕೆಯನ್ನು ಆಧರಿಸಿ ಕರ್ನಾಟಕ ರಾಜ್ಯ ಪರಿಸರ ಮಾಲಿನ್ಯ ನಿಯಂತ್ರಣ ಮಂಡಳಿಯಿಂದ "ಕನ್ಸೆಂಟ್ ಫಾರ್ ಆಪರೇಷನ್" ಅನುಮತಿಯನ್ನು ಪಡೆಯಬೇಕಾಗುತ್ತದೆ. |

**ಸಿಐ 150 ಎಸ್‌ಎಸ್‌ಐ 2025**

**(ಶರಣಬಸಪ್ಪ ದರ್ಶನಾಪೂರ)**
ಸಣ್ಣ ಕೈಗಾರಿಕೆ ಮತ್ತು ಸಾರ್ವಜನಿಕ
ಉದ್ದಿಮೆಗಳ ಸಚಿವರು.

Scanned with OKEN Scanner

ಅನುಬಂಧ-1

| District wise MSME Registration in Govt of India Udyam Portal (From July 2020 to 27.11.2025) | | | | |
|---|---|---|---|---|
| **District Name** | **Medium** | **Micro** | **Small** | **Grand Total** |
| BAGALKOT | 13 | 56283 | 353 | 56649 |
| BALLARI | 63 | 54961 | 912 | 55936 |
| BELAGAVI | 65 | 165184 | 1149 | 166398 |
| BENGALURU (RURAL) | 144 | 111269 | 1521 | 112934 |
| BENGALURU (URBAN) | 1329 | 602372 | 13911 | 617612 |
| BIDAR | 19 | 45153 | 331 | 45503 |
| CHAMARAJNAGAR | 5 | 25981 | 162 | 26148 |
| CHIKBALLAPUR | 13 | 42156 | 314 | 42483 |
| CHIKKAMAGALURU | 17 | 37387 | 375 | 37779 |
| CHITRADURGA | 23 | 45179 | 359 | 45561 |
| DAKSHIN KANNAD | 80 | 92324 | 1211 | 93615 |
| DAVANGERE | 25 | 61995 | 566 | 62586 |
| DHARWAD | 66 | 87824 | 937 | 88827 |
| GADAG | 2 | 32010 | 221 | 32233 |
| HASSAN | 27 | 62228 | 672 | 62927 |
| HAVERI | 18 | 49977 | 399 | 50394 |
| KALABURAGI | 29 | 58591 | 635 | 59255 |
| KODAGU | 23 | 19645 | 239 | 19907 |
| KOLAR | 34 | 50021 | 494 | 50549 |
| KOPPAL | 10 | 33770 | 478 | 34258 |
| MANDYA | 8 | 55555 | 421 | 55984 |
| MYSURU | 62 | 133122 | 1291 | 134475 |
| RAICHUR | 37 | 43642 | 716 | 44395 |
| RAMANAGARA | 22 | 42913 | 340 | 43275 |
| SHIVAMOGGA | 26 | 66402 | 610 | 67038 |
| TUMAKURU | 30 | 92619 | 873 | 93522 |
| UDUPI | 46 | 54686 | 612 | 55344 |
| UTTAR KANNADA | 3 | 51612 | 307 | 51922 |
| VIJAYANAGAR | 12 | 26156 | 232 | 26400 |
| VIJAYAPURA | 31 | 58252 | 508 | 58791 |
| YADGIR | 8 | 24543 | 197 | 24748 |
| **Grand Total** | **2290** | **2383812** | **31346** | **2417448** |